ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವರು ಯಾವ ಪಕ್ಷದವರು ಅನ್ನುವುದು ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ ಹೇಳಬೇಕು.

ಶ್ರೀ ಹಂಜಿ ಶಿವಣ್ಣ.—ಹರಿಜನರಿಗೆ ಮನೆ ಕಟ್ಟಲು ಕೊಟ್ಟಂಥ ನಾಟಾವನ್ನು ಕೆಲವು ಖದೀಮರು ಸೇರಿ ದುರುಪಯೋಗ ಮಾಡಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ಮತ್ತು ಇದನ್ನು ಯಾರು ದುರುಪಯೋಗ ಮಾಡಿದ್ದಾರೆ ಅಂಥಾವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹರಿಜನರಿಗೆ ಕೊಟ್ಟಂಥ ನಾಟಾ ದುರುಪಯೋಗ ವಾಗಿದೆ ಎಂದು ಗೊತ್ತಾಗಿದೆ. ತಾಲ್ಲೂಕು ಬೋರ್ಡ್ ಪ್ರೆಸಿಡೆಂಟ್‌ರು ದುರುಪಯೋಗ ಮಾಡಿ ಕೊಂಡಿದ್ದಾರೆ ಎಂದು ಗೊತ್ತಾದ ಮೇಲೆ ಆ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈ ಮನೆ ಕಟ್ಟುವುದಕ್ಕೆ ನೀವು ಏನು ಸಬ್ಸಿಡಿಯನ್ನು ಮಂಜೂರು ಮಾಡುತ್ತಿರೋ ಅವನ್ನು ಮನೆ ಕಟ್ಟುವ ಮುನ್ನ ಕೊಡುತ್ತೀರೋ, ಮನೆ ಕಟ್ಟುವಾಗ ಕೊಡುತ್ತೀರೋ ಅಥವಾ ಮನೆ ಕಟ್ಟಿ ಮುಗಿಸಿದ ಮೇಲೆ ಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದಕ್ಕೆ ಸಂಬಂಧಪಟ್ಟ ಬಿ.ಡಿ.ಓ. ಇದ್ದಾರೆ, ಸೂಪರ್ ವೈಸರ್ ಇರುತ್ತಾರೆ, ಗ್ರಾಮಸೇವಕರು ಇರುತ್ತಾರೆ, ವೆಟರ್ನರಿ ಅಸಿಸ್ಟೆಂಟ್ ಸರ್ಜನ್ಸ್ ಇರುತ್ತಾರೆ, ಅವರು ಈ ಬಗ್ಗೆ ಒಂದು ವರದಿ ಕೊಟ್ಟಾದ ಮೇಲೆ ಸಬ್ಸಿಡಿ ಕೊಡುತ್ತೇವೆ. ಈ ರೀತಿ ಸಬ್ಸಿಡಿ ಕೊಟ್ಟಾದ ಮೇಲೆ ಅವರು ಮನೆ ಕಟ್ಟಿಲ್ಲ. ಅದು ದುರುಪಯೋಗವಾಗಿದೆ ಎಂದು ಗೊತ್ತಾದ ಮೇಲೆ ಆ ಬಗ್ಗೆ ಎನ್‌ಕ್ವೈರಿ ಮಾಡುತಿದ್ದೇವೆ.

Supply Fertilisers to Nanjangud Taluk

676 Sri N. S. GURUSIDDAPPA (Biligere).—

Will the Minister for Agriculture and Forests be pleased to state:—

(*a*) the numbers of wet lands in Nanjangud Taluk;

(*b*) the quantity of fertiliser supplied to the Taluk:

(*c*) the steps taken to avoid the scarcity of fertilisers in future ?

Sri K. H. PATIL (Minister for Agriculture and Forests).—

(*a*) 32,018 acres.

(*b*) 602 tonnes.

(*c*) Government have been in constant touch with Government of India and domestic manufacturers,in order to ensure supply of sufficient fertilisers to the State. The provisions of the Essential Commodities Act are also invoked against domestic manufacturers, whenever necessary, to see that they adhere to the supply plans. Government have appointed a Liaison Officer to arrange for expeditious despatches of Pool fertilisers to this State from the Madras Port.

Supply of fertilisers in the District, is entrusted to the District Leval Fertiliser allotment Committee of which the Deputy Commmissioner is the Chairman.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಸ್ವಾಮಿ, (ಅ)ಗೆ ಉತ್ತರವಾಗಿ 32,018 ಎಕರೆಗಳು ಇದೆ ಎಂದು ಹೇಳಿದ್ದೀರಿ. ಮತ್ತು ಅದೇ (ಆ) ಗೆ ಉತ್ತರವಾಗಿ 602 ಟನ್‌ಗಳಷ್ಟು ಗೊಬ್ಬರವನ್ನು ಒದಗಿಸಲಾಗಿದೆ ಎಂದು ಹೇಳುತ್ತೀರಿ. 602 ಟನ್ ಗೊಬ್ಬರ ಅಂದರೆ 60 ಸಾವಿರ ಕೆ. ಜಿ. ಗೊಬ್ಬರ ಆದ ಹಾಗಾಯಿತು. ಈಗ ನಮಗೆ 80 ಸಾವಿರ ಕೆ. ಜಿ. ಅಷ್ಟು ಗೊಬ್ಬರ ಬೇಕಾಗಿದೆ. ಈಗ ನೀವು ಕೊಟ್ಟಿರುವ ಲೆಕ್ಕಾಚಾರದ ಪ್ರಕಾರ ನಮಗೆ 20 ಸಾವಿರ ಕೆ.ಜಿ. ಅಷ್ಟು ಗೊಬ್ಬರ ಕೊರತೆ ಬರುತ್ತದೆ. ಆದುದರಿಂದ ಮುಂದಿನ ಬೆಳೆಗಾದರೂ ಈ ತೊಂದರೆಯನ್ನು ನೀವಾರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

† ಶ್ರೀ ಕೆ. ಎಚ್. ಪಾಟೀಲ್.—20 ಸಾವಿರ ಕೆ. ಜಿ. ಗೊಬ್ಬರ ನಿಮ್ಮ ತಾಲ್ಲೂಕಿಗೆ ಕಡಿಮೆ ಯಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವರು ಗೊಬ್ಬರ ಹಾಕುವುದಿಲ್ಲ, ನಾವು ನೈಟ್ರಜನ್ ಮತ್ತು ಯೂರಿಯಾ ಫರ್ಟಿಲೈಸರ್ಸ್‌ನ್ನು ಏನು ಸಪ್ಲೈ ಮಾಡುತ್ತೇವೆಯೋ ಅದನ್ನು ಪೂರ್ತಿಯಾಗಿ ಸಪ್ಲೈ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಈಗ 602 ಟನ್ ಅಷ್ಟು ಗೊಬ್ಬರವನ್ನು ಒದಗಿಸಲಾಗಿದೆ ಎನ್ನುವುದನ್ನು ತಿಳಿಸಿದ್ದೀರಿ. ಅದು ಯಾವ ದರದಲ್ಲಿ ಮಾರಾಟವಾಗುತ್ತ ಇದೆ?

ಶ್ರೀ ಕೆ. ಎಚ್. ಪಾಟೀಲ್.—ಅದಕ್ಕೆ ಕಂಟ್ರೋಲ್ ರೇಟ್ ಇದೆ, ಅದರಂತೆ ಮಾರುತ್ತಾರೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಈಗ ಈ ಯೂರಿಯಾ ಮತ್ತು ನೈಟ್ರಜನ್ ಫರ್ಟಿಲೈಸರ್ಸ್ ಯಾವ ಏಜೆನ್ಸಿ ಮೂಲಕ ಡಿಸ್ಟ್ರಿಬ್ಯೂಟ್ ಆಗುತ್ತದೆಯೋ ಅವರಿಗೆ ಎಷ್ಟೆಷ್ಟು ಗೊಬ್ಬರವನ್ನು ಸಪ್ಲೈ ಮಾಡಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.—ನೋಟೀಸ್.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಈ ಗೊಬ್ಬರ ಯಾವ ಏಜೆನ್ಸಿ ಮೂಲಕ ಸಪ್ಲೈ ಆಗುತ್ತಿದೆ?

ಶ್ರೀ ಕೆ. ಎಚ್. ಪಾಟೀಲ್.—ಒಂದು ಮೈಸೂರು ಸ್ಟೇಟ್ ಆಗ್ರೋ ಇಂಡಸ್ಟ್ರಿಸ್ ಕಾರ್ಪೊರೇಷನ್, ಎರಡನೇದು ಮೈಸೂರು ಸ್ಟೇಟ್ ಫೆಡರೇಷನ್ ಕಾರ್ಪೊರೇಷನ್ ಮುಖಾಂತರ ಸಪ್ಲೈ ಆಗುತ್ತಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಈಗ ಅಮೋನಿಯಾ ಮತ್ತು ಯೂರಿಯಾ ಫರ್ಟಿಲೈಸರ್ ಕಂಟ್ರೋಲ್ ರೇಟ್ ಏನು ಇದೆ ಅದಕ್ಕಿಂತ ಜಾಸ್ತಿಯಾಗಿ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಾ ಇದ್ದಾರೆ. ಅದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಎಚ್. ಪಾಟೀಲ್.—ಕೆಲವು ಸಂದರ್ಭಗಳಲ್ಲಿ ಅದು ಸರ್ಕಾರದ ಗಮನಕ್ಕೆ ಬಂದಿದೆ. ಆ ರೀತಿ ಗಮನಕ್ಕೆ ಬಂದ ಮೇಲೆ ಯಾರು ಯಾರು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಾರೋ ಅವರ ಮೇಲೆ ಕಟ್ಟುನಿಟ್ಟಾಗಿ ಹಾಕಿದ್ದೇವೆ, ಆ ಕಟ್ಟುನಿಟ್ಟಿನ ಕೋರ್ಟ್‌ನಲ್ಲಿ ಇದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಈಗ ಜಿಲ್ಲೆಯಲ್ಲಿ ರಾಸಾಯನಿಕ ಗೊಬ್ಬರವನ್ನು ನರಬರಾಜು ಮಾಡುವ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿಯವರು ಅಧ್ಯಕ್ಷರಾಗಿರುವ ಜಿಲ್ಲಾ ಮಟ್ಟದ ರಾಸಾಯನಿಕ ಗೊಬ್ಬರ ವಿತರಣಾ ಸಮಿತಿಗೆ ವಹಿಸಿಕೊಡಲಾಗಿದೆ ಎಂದು ಹೇಳಿದ್ದೀರಿ? ಆದರೆ ಇದನ್ನು ವಿತರಣೆ ಮಾಡುವಾಗ ಏರುಪೇರುಗಳು ಮಾಡುತ್ತಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೆ? ಆ ರೀತಿ ಬಂದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಕೆ. ಎಚ್. ಪಾಟೀಲ್.—ಆ ರೀತಿ ಏನಾದರೂ ಇದ್ದರೆ ಆ ಬಗ್ಗೆ ಡೆಪ್ಯೂಟಿ ಕಮೀಷನರಿಗೆ ಬರೆದು ಅದನ್ನು ಸುಧಾರಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, ಈಗ ರಾಜ್ಯದಲ್ಲಿ ಗೊಬ್ಬರದ ಆವಶ್ಯಕತೆ ಎಷ್ಟು ಇದೆ, ಆ ಆವಶ್ಯಕತೆಗನುಗುಣವಾಗಿ ಸರ್ಕಾರದವರು ಒದಗಿಸುತ್ತಾ ಇಲ್ಲ. ಇದರಿಂದ ಬ್ಲಾಕ್‌ಮಾರ್ಕೆಟ್‌ನಲ್ಲಿರೇಟ್ ಜಾಸ್ತಿಯಾಗುತ್ತಾ ಇದೆ. ಆದುದರಿಂದ ಇದನ್ನು ತಡೆಗಟ್ಟುವುದಾಗಲಿ ಮತ್ತು ಆವಶ್ಯಕತೆಗನುಗುಣವಾಗಿ ಸಪ್ಲೈ ಮಾಡುವುದಕ್ಕೆ ಆಗಲಿ ಒಂದು ವ್ಯವಸ್ಥೆ ಮಾಡಬೇಕು. ಅಲ್ಲದೆ ಈಗ ಈ ಎರಡು ಏಜೆನ್ಸಿಯವರು ಏನು ಗೊಬ್ಬರ ಮಾರಾಟ ಮಾಡುತ್ತಿದ್ದಾರೋ ಅದನ್ನು ಅವರು ಬೇರೆ ಬೇರೆ ದರದಲ್ಲಿ ಮಾರಾಟ ಮಾಡುತ್ತಿದ್ದಾರೆ. ರೈತರಿಗೆ ಇದರಿಂದಾಗುವ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.— ಒಂದನೇದು ಅವರು ಬೇರೆ ಬೇರೆ ದರದಲ್ಲಿ ಮಾರಾಟ ಮಾಡುವುದಿಲ್ಲ. ಇದಕ್ಕಾಗಿ ಏರಡು ಎಜೆನ್ಸಿ ಇದ್ದರೂ ಸಹ ಅವರು ನಿರ್ದಿಷ್ಟವಾದ ಬೆಲೆಯಲ್ಲಿ ಮಾರಾಟ ಮಾಡಬೇಕು ಎಂದು ತಿಳಿಸಲಾಗಿದೆ, ಅವರು ಕಡಿಮೆ ಬೆಲೆಯಲ್ಲಿ ಮಾರಿದರೆ ಅದರಲ್ಲಿ ನಮ್ಮ ಅಪರಾಧವೇನೂ ಇಲ್ಲ. ಆದರೆ ನಿರ್ದಿಷ್ಟವಾದ ಅವಧಿಗಿಂತ ಹೆಚ್ಚಿಗೆ ದರದಲ್ಲಿ ಮಾರಿದರೆ ಅವರಿಗೆ ಉಗ್ರವಾದ ಶಿಕ್ಷೆ ಕೊಡುತ್ತೇವೆ. ಎರಡನೆಯದಾಗಿ ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಗೊಬ್ಬರದ ಕೊರತೆಯಿಂದ ಇದನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿ ಹೆಚ್ಚಿನ ಹಣ ಪಡೆಯುವುದಕ್ಕೆ ಆ ಸೊಸೈಟಿಯವರೇ ಅನ್ಯಾಯ ಮಾಡುವುದಕ್ಕೆ ಹೋದರೆ ನಾವು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಸದಸ್ಯರುಗಳ ಸಹಕಾರ ಮತ್ತು ನಮ್ಮ ಸಹಕಾರ ಎರಡನ್ನೂ ಉಪಯೋಗಿಸಿ ಕೆಲಸ ಮಾಡಬೇಕಾಗುತ್ತದೆ.

ಶ್ರೀ ಕೆ. ಪ್ರಭಾಕರ್.—ದೇಶದಲ್ಲಿ ಗೊಬ್ಬರದ ಕೊರತೆಯಿಂದಾಗಿ ಇದನ್ನು ವಿತರಣೆ ಮಾಡುವಾಗ ಕರ್ತವ್ಯ ಲೋಪಗಳನ್ನು ಮಾಡಿ ಬಡ ರೈತರಿಗೆ ಸಿಕ್ಕುವುದಿಲ್ಲ. ಈ ರೀತಿ ವರ್ತನೆ ಮಾಡುವವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಕೆ. ಎಚ್. ಪಾಟೀಲ್.—ಆ ರೀತಿ ಯಾರಾದರೂ ಕರ್ತವ್ಯ ಲೋಪ ಮಾಡಿದಾಗ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ. - ಈ ವರ್ಷ 602 ಟನ್ ಗೊಬ್ಬರ ಏನು ಒದಗಿಸಿದ್ದೀರಿ ಅದು ಸಾಕಾಗುವುದಿಲ್ಲ, ಅದುದರಿಂದ ಮುಂದಿನ ವರ್ಷವಾದರೂ ಇದರ ಅಭಾವ ಇಲ್ಲದೇ ಇರುವ ಹಾಗೆ ಈ ಕೊರತೆಯನ್ನು ನೀಗಿರುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಹಾಗೆ ಈ ವರ್ಷ ಜಾಸ್ತಿ ಬೇಕಾಗುತ್ತದೆ ಎಂದು ಗೊತ್ತಾಗಿದೆ. ಆದರೆ ಸಂಪೂರ್ಣವಾಗಿ ಈ ಕೊರತೆಯನ್ನು ನೀಗಿಸುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ.

Aid to Villagers Affected by Floods

678. **Sri N. S. GURUSIDDAPPA** (Biligere).—

Will the Minister for Revenue be pleased to state :—

(*a*) the number of paddy fields in Hedathale, Hemmaragala, Singaripura, damaged by the flood during the month of December;

(*b*) the aid given to the flood affected villgers by the Government?

Sri N. HUTCHAMSTHY GOWDA (Minister of Revenue).—

(*a*) (1) Hedathale village (including Singaripura which is a bamlet of Hedathale)—58.

(2) Hemmaragala village—No damage to paddy fields is reported.

(*b*) The question is under consideration.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಸ್ವಾಮಿ, ಡಿಶಂಬರ್ ತಿಂಗಳಿನಲ್ಲಿ ನಷ್ಟಕ್ಕೊಳಗಾದ ಹೆಡತಾರೆ, ಹೆಮ್ಮರಗಾಲ ಹಾಗೂ ಸಿಂಗಾರಿಪುರದಲ್ಲಿನ ಬತ್ತದ ಗದ್ದೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ 58 ಎಕರೆ ಎಂದು ಹೇಳಿದ್ದೀರಿ. ಅಲ್ಲಿ 5—6 ಕಡೆಗಳಲ್ಲಿ ಬತ್ತದ ಗದ್ದೆಗಳೆರ್ಲಾ ಹಾಳಾಗಿ ಹೋಗಿದೆ. ಈ ಬಗ್ಗೆ ಡೆಪ್ಯೂಟಿ ಕಮೀಷನರ್, ಅಸಿಸ್ಟೆಂಟ್ ಕಮೀಷನರ್ ಮತ್ತು ತಹಸೀಲ್ದಾರ್ ರವರ ಗಮನಕ್ಕೆ ತಂದಿದ್ದರೂ ಕೂಡ ಈವೊತ್ತಿನವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಆ ರೀತಿ ನಷ್ಟಕ್ಕೊಳಗಾದವರಿಗೆ ಏನಾದರೂ ಪರಿಹಾರ ಕೊಡುತ್ತೀರಾ ?